ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1676
2)	ಮಾನ್ಯ ಸದಸ್ಯರ ಹೆಸರು	ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
3)	ಉತ್ತರಿಸಬೇಕಾದ ದಿನಾಂಕ	23/03/2020
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಸ್.ಸಿ.ವಿ.ಟಿ. ವತಿಯಿಂದ ನಡೆಯುತ್ತಿರುವ ಐ.ಟಿ.ಐ ಕಾಲೇಜುಗಳ ಸಂಖ್ಯೆ ಎಷ್ಟು;	132
ಆ)	ಎಸ್.ಸಿ.ವಿ.ಟಿ. ವತಿಯಿಂದ ನಡೆಯುತ್ತಿರುವ ಐ.ಟಿ.ಐ ಕಾಲೇಜುಗಳ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಕಳೆದ 02 ವರ್ಷಗಳಿಂದ ಪ್ರಕಟಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಂಯೋಜನೆ ಪಡೆದು ನಿಯಮಾನುಸಾರ ಪರೀಕ್ಷೆಗೆ ಹಾಜರಾದ ತರಬೇತಿದಾರರ SCVT-2017 & SCVT-2018 ರ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಲಾಗಿದೆ.
ಇ)	ಬಂದಿದ್ದಲ್ಲಿ ಫಲಿತಾಂಶ ವಿಳಂಬವಾಗಲು ಕಾರಣವೇನು;	i) 2014–16 ಮತ್ತು 2015–17ನೇ ಸಾಲಿನಲ್ಲಿ ಪ್ರವೇಶ ಪಡೆದು ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದಡಿ, SCVT ಪರೀಕ್ಷೆಗೆ ಕೆಲವು ಕೈಗಾರಿಕಾ ತರಬೇತಿ ಸಂಸ್ಥೆಗಳ ತರಬೇತಿದಾರರು ಹಾಜರಾಗಿರುತ್ತಾರೆ. ನಿಯಮಾನುಸಾರ ಸಂಯೋಜನೆ ಪಡೆದು, ವೃತ್ತಿ / ಘಟಕಗಳಲ್ಲಿ ಪ್ರವೇಶ ಪಡೆದು ವಿಭಾಗೀಯ ಕಚೇರಿಯಿಂದ ಪ್ರವೇಶ ಪಟ್ಟಿ ಅನುಮೋದನೆ ಪಡೆದಿಲ್ಲದೇ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳಂತೆ ಪರೀಕ್ಷೆಗೆ ಹಾಜರಾದ ತರಬೇತಿದಾರರ ಹಾಗೂ ಸಂಯೋಜನೆ ವಿಭಾಗದಿಂದ ಶಿಫಾರಸ್ಸುಗೊಂಡಿರುವ ಸಂಸ್ಥೆಗಳ ಫಲಿತಾಂಶ ಈಗಾಗಲೇ ಪ್ರಕಟಿಸಲಾಗಿದೆ. ಮತ್ತು ಬಾಕಿ ಉಳಿದ 24 ಕೈಗಾರಿಕಾ ತರಬೇತಿ ಸಂಸ್ಥೆಗಳ ಫಲಿತಾಂಶ ನೀಡಲು ಕ್ರಮ ವಹಿಸಲಾಗುತ್ತಿದೆ. ii) 2014–16 & 2015–17 ಸಾಲಿನಲ್ಲಿ ಪ್ರವೇಶ ಪಡೆದು ಸಂಯೋಜನೆ ಹೊಂದಿಲ್ಲದ ವೃತ್ತಿ / ಘಟಕಗಳಲ್ಲಿ ಪ್ರವೇಶ ಪಡೆದು, ವಿಭಾಗೀಯ ಕಚೇರಿ ಜಂಟಿ ನಿರ್ದೇಶಕರಿಂದ ಪ್ರವೇಶ ಪಟ್ಟಿ ಅನುಮೋದನೆ ಪಡೆದಿಲ್ಲದ, ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದಡಿ ಪರೀಕ್ಷೆಗೆ ಹಾಜರಾದ 61 ಕೈಗಾರಿಕಾ ತರಬೇತಿ ಸಂಸ್ಥೆಗಳ ತರಬೇತಿದಾರರ ಫಲಿತಾಂಶ ಪ್ರಕಟಿಸಲು ಹಾಗೂ ಅಂಕಪಟ್ಟಿ ನೀಡಲು ನಿಯಮಗಳಲ್ಲಿ ಅವಕಾಶವಿಲ್ಲವೆಂದು ತಿರಸ್ಕರಿಸಲಾಗಿದೆ.

--2

ಈ)	ಇನ್ನಾದರೂ ಆದಷ್ಟು ಶೀಘ್ರವಾಗಿ ಪರೀಕ್ಷಾ ಫಲಿತಾಂಶಗಳನ್ನು ಪ್ರಕಟಿಸಲಾಗುವುದೇ;	ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣಗಳಲ್ಲಿ ಸಂಯೋಜನೆ ಹೊಂದಿದ, ಪ್ರವೇಶ ಪಟ್ಟಿ ಅನುಮೋದನೆ ಪಡೆದಿಲ್ಲದ ವೃತ್ತಿ ಘಟಕಗಳಲ್ಲಿ ಎಸ್.ಸಿ.ವಿ.ಟಿ ಅಡಿಯಲ್ಲಿ ಪರೀಕ್ಷೆಗೆ ಹಾಜರಾದ 24 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ತರಬೇತಿದಾರರ ಫಲಿತಾಂಶ ಪ್ರಕಟಿಸಲು ಕ್ರಮವಹಿಸಲಾಗುತ್ತಿದೆ.
ಉ)	ಫಲಿತಾಂಶ ವಿಳಂಬವಾಗಿರುವುದರಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗಿರುವುದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ನ್ಯಾಯಾಲಯದ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ತರಬೇತಿದಾರರ ಫಲಿತಾಂಶ ಪ್ರಕಟಣೆಯಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ.

ಸಂಖ್ಯೆ: ಕೌಉಜೀಇ 20 ಕೈತಪ್ರ 2020

(ಡಾ.ಸಿ.ಎನ್.ಅಶ್ವತ್ಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು